ವಾರದ ಪತ್ರ

## ಕಣ್ಣೀರು ಸುರಿಸಿದ ಜೋಕರ್ಸ್

‘ಮೇರಾ ನಾಮ್ ಜೋಕರ್’ ಪ್ರಸಿದ್ಧ ಹಿಂದಿ ಸಿನಿಮಾವನ್ನು ನೆನಪಿಸಿದರು ‘ಝೀ ಕನ್ನಡದ ‘ಡ್ರಾಮಾ ಜೂನಿಯರ್ಸ್’ ಮಕ್ಕಳು. ವೃತ್ತಿರಂಗಭೂಮಿಯ ಹಾಸ್ಯ ಕಲಾವಿದರ ಬದುಕಿನ ಸರಳ ಕಥಾ ವಸ್ತುವಿನ ನಿರೂಪಣೆಯ ರೂಪಕ ವೀಕ್ಷಕರನ್ನು ಕರುಣಾಸಾಗರದಲ್ಲಿ ಮುಳುಗಿಸಿತು.

ಹಾಸ್ಯದ ಮೂಲಕ ಪ್ರೇಕ್ಷಕರ ಮೆಚ್ಚುಗೆಯ ಚಪ್ಪಾಳೆಯನ್ನು ಗಿಟ್ಟಿಸಿಕೊಳ್ಳಬೇಕು ಎನ್ನುವ ಬಯಕೆ ಒಬ್ಬ ಕಲಾವಿದನನ್ನು ಬಹುದಿನಗಳಿಂದ ಕಾಡುತ್ತಿರುತ್ತದೆ. ಕೊನೆಗೂ ಒಂದು ದಿನ ಅದು ಈಡೇರುತ್ತದೆ. ತುಂಬ ಸಂದಿಗ್ಧ ಸಂದರ್ಭದಲ್ಲಿ ಆ ಅವಕಾಶ ಅವನಿಗೆ ಒದಗಿ ಬರುತ್ತದೆ. ಆದರೆ ಆ ವಿದೂಷಕ ಹೃದ್ರೋಗದ ಸಮಸ್ಯೆಯನ್ನು ಎದುರಿಸುತ್ತಿರುತ್ತಾನೆ. ನಾಟಕ ಯಶಸ್ವಿ ಪ್ರದರ್ಶನದ ಕೊನೆಯ ಹಂತದಲ್ಲಿ ಅನಿಶ್ಚಿತ ಬದುಕನ್ನು ಕುರಿತು ‘ಡ್ರಾಮಾ ಜೂನಿಯರ್ಸ್’ ವಿದಾಯದ ಸಂದರ್ಭದಲ್ಲಿ ಆತ ಹೇಳುವ ಡೈಲಾಗ್ ಮೌಲ್ಯಮಾಪಕರೂ ಸೇರಿದಂತೆ ವೀಕ್ಷಕರಲ್ಲಿ ಕಣ್ಣೀರಧಾರೆಯನ್ನೇ ಹರಿಸಿತು.

—ಹರ್ಷ ಎಸ್., ಬೆಂಗಳೂರು



## ಮಹಾನಟಿ ಯಾರಾಗಬಹುದು?

ಝೀ ಕನ್ನಡದ ‘ಮಹಾನಟಿ’ ರಿಯಾಲಿಟಿ ಶೋ ಭಿನ್ನವಾಗಿದೆ. ಪ್ರಸ್ತುತ ಅಭಿನಯ ಜಗತ್ತಿನಲ್ಲಿ ನಟನೆಗೆ ಪೂರಕವಾಗಿ ನಾಟ್ಯದಂತಹ ತರಬೇತಿಯೂ ಅಗತ್ಯ ಇರುತ್ತದೆ. ಮಹಾನಟಿ ಆಗುವ ಯೋಗ ಈ ಸ್ಪರ್ಧಿಗಳಲ್ಲಿ ಯಾರಿಗೆ ಕಾದಿದಿಯೋ? ನಟಿಸುವ ಆಸೆ ಇದ್ದವರಿಗೆ ಮಹಾನಟಿ ಶೋ ಉತ್ತಮ ವೇದಿಕೆ. ಚಿತ್ರದುರ್ಗದ ಗಗನ ಎಂಬ ಸ್ಪರ್ಧಿಯ ಹಾಸ್ಯಭರಿತ ಮಾತು ನೋಡಲು ಇಷ್ಟವಾಗುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಮಕ್ಕಳ ಮೂಲಕ ಗೀತೆಯ ಬೋಧೆ



ಪುಟ್ಟ ಮಕ್ಕಳ ಪ್ರತಿಭೆಗೆ ವೇದಿಕೆ ಕಲ್ಪಿಸಿರುವ ಝೀ ಕನ್ನಡ ವಾಹಿನಿಯ ‘ಡ್ರಾಮಾ ಜೂನಿಯರ್ಸ್’ ಕಾರ್ಯಕ್ರಮ ಹೊಸ ಮೈಲುಗಲ್ಲನ್ನು ನಿರ್ಮಿಸುತ್ತಲೇ ಇದೆ. ಈಚೆಗೆ ನಡೆದ ಸೆಮಿಫೈನಲ್ ಸ್ಪರ್ಧೆಯಲ್ಲಿ ಅಮೋಘವಾದ ಗ್ರಾಫಿಕ್ಸ್ ತಂತ್ರಜ್ಞಾನದ ದೃಶ್ಯ ವೈಭವ ಮೆರೆದು ಮತ್ತೊಂದು ದಾಖಲೆಯನ್ನು ನಿರ್ಮಿಸಿತು.

ನೈಜ ಎನ್ನುವಷ್ಟು ಮೆರುಗು ನೀಡಿದ ಗ್ರಾಫಿಕ್ಸ್‌ಗೆ ಸರಿಸಮ ಎನ್ನುವಂತೆ ಮಕ್ಕಳ ಅಭಿನಯದಿಂದಾಗಿ ರೂಪಕ ಮನಸೂರೆಗೊಂಡಿತು. ಅರ್ಜುನ ರಣರಂಗದಲ್ಲಿ ತನ್ನವರನ್ನು ನೋಡಿ ಯುದ್ಧ ಮಾಡಲು ನಿರಾಕರಿಸುತ್ತಾನೆ. ಸಾರಥಿ ಶ್ರೀಕೃಷ್ಣ ವಿಶ್ವರೂಪ ತೋರಿಸಿ, ಅರ್ಜುನನಿಗೆ ಕರ್ತವ್ಯವನ್ನು ಮಾಡಲು ನಿರ್ದೇಶಿಸುತ್ತಾನೆ. ಆಗ ಬೋಧಿಸಿದ ಗೀತೋಪದೇಶದ ಸಾರಾಂಶ ಚೆನ್ನಾಗಿತ್ತು. ತಂತ್ರಜ್ಞಾನದ ಮುಖಾಂತರ ಮಕ್ಕಳ ಅಭಿನಯ ಪ್ರೇಕ್ಷಕರನ್ನು ನಿಜಕ್ಕೂ ಮಂತ್ರಮುಗ್ಧಗೊಳಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

## ಪಾರಾದ ಅನುಭವ!

ಬರೋಬ್ಬರಿ 1300ಕ್ಕೂ ಅಧಿಕ ಕಂತುಗಳಲ್ಲಿ, ಸರಿಸುಮಾರು ಐದು ವರ್ಷಗಳ ಕಾಲ ಪ್ರೇಕ್ಷಕರಿಗೆ ನಿರಂತರ ‘ಬೋರು’ಗರೆದ ಝೀ ಕನ್ನಡದ ‘ಪಾರು’ ಧಾರಾವಾಹಿ ಕಡೆಗೂ ಅರ್ಥಹೀನವಾಗಿಯೇ ಕೊನೆ ಕಂಡಿದೆ. ನೋಡುಗರಿಗೆ ಒಂದರ್ಥದಲ್ಲಿ ಜೀವಾವಧಿ ಶಿಕ್ಷೆಯಿಂದ ಪಾರಾದ ಅನುಭವ ನೀಡುವಲ್ಲಿ ಯಶಸ್ವಿಯಾಗಿದೆ. ವಿನಯಾ ಪ್ರಸಾದ ಅವರಂಥ ಪ್ರಬುದ್ಧ ನಟಿ ಸಹ ಈ ನೀರಸ ಧಾರಾವಾಹಿಯಿಂದ ಬೇಸತ್ತಿದ್ದರು ಎಂದೆನಿಸುತ್ತದೆ. ‘ಪಂಚ ವಾರ್ಷಿಕ ಯೋಜನೆ’ಯಂತಿದ್ದ ಪಾರುವಿನಿಂದ ನೋಡುಗರು ಪಾರಾದದ್ದೇ ಒಂದು ಪವಾಡ ಎನ್ನಬಹುದು.

—ವಾ. ಮುರಳೀಧರ, ತೀರ್ಥಹಳ್ಳಿ

## ನಾಟಕ ಆಗದಿರಲಿ ಚುನಾವಣಾ ಹಬ್ಬ

ಟೀವಿ ಮಾಧ್ಯಮಗಳಿಗೆ ಚುನಾವಣೆ ಎಂದರೆ ಹಬ್ಬ. ಅವರು ಮಾಡುವ ಸಮೀಕ್ಷೆ ನಾಟಕದಂತೆ ಕಾಣಿಸುತ್ತಿದೆ. ಎಲ್ಲೆಡೆ ಜಾತಿಯನ್ನು ಒತ್ತಿ ಹೇಳುವ ಸಮೀಕ್ಷೆ ಕಿರಿಕಿರಿ ಎನ್ನಿಸುತ್ತದೆ. ಪ್ರಬುದ್ಧ ವಿಚಾರ, ವಿವರಣೆ ಅವರಿಗೆ ತಿಳಿದಿಲ್ಲ ಅಥವಾ ಬೇಕಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ರಾಜಕೀಯದ ಮಧ್ಯ ಬಿಡುವು

ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳ ಕೆಸರೆರಚಾಟದ ಸುದ್ದಿಗಳನ್ನೇ ಬಿಟ್ಟೂ ಬಿಡದೆ ಪ್ರಸಾರ ಮಾಡುತ್ತಿದ್ದ ಕನ್ನಡ ಸುದ್ದಿವಾಹಿನಿಗಳು ದಿಢೀರೆಂದು ಚುನಾವಣಾ ವರದಿ ನಿಲ್ಲಿಸಿದ್ದೂ ಆಶ್ಚರ್ಯದ ಸುದ್ದಿ! ಇದೇನಪ್ಪ ಆಶ್ಚರ್ಯ ಎಂದು ನೋಡಿದರೆ ನಟ ದ್ವಾರಕೀಶ್ ಅವರ ನಿಧನದ ಸಂತಾಪ ಸುದ್ದಿ ಕಾಣಿಸಿತು. ದ್ವಾರಕೀಶ್ ಅಭಿನಯದ ಮತ್ತು ನಿರ್ಮಿಸಿದ ಸಿನಿಮಾಗಳ ಹಿನ್ನೆಲೆಯಲ್ಲಿ ಅವರ ಸಾಧನೆಯ ಹಿರಿಮೆ ಗರಿಮೆಗಳನ್ನು ಪರಿಚಯಿಸಿದರು.

ಚಿತ್ರರಂಗದ ‘ಪ್ರಚಂಡ ಕುಳ್ಳ’ನಾಗಿ ‘ವೀರ ಸಂಕಲ್ಪ’ ಮಾಡಿದ್ದ ‘ಭಾಗ್ಯವಂತ’ ಅಷ್ಟೇ ಅಲ್ಲ ‘ಅದೃಷ್ಟವಂತ’... ಹೀಗೆ ಅವರ ವ್ಯಕ್ತಿತ್ವವನ್ನು ಪರಿಚಯಿಸಿದ್ದು ಚೆನ್ನಾಗಿತ್ತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಗಟ್ಟಿಗಿತ್ತಿ ಭಾಗ್ಯಾ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಭಾಗ್ಯಲಕ್ಷ್ಮೀ’ ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. ಭಾಗ್ಯಾ ಹಾಗೂ ಕುಸುಮಾ ಪಾತ್ರಗಳು ಬಹಳ ಚೆನ್ನಾಗಿ ಬಿಂಬಿತವಾಗಿವೆ. ಅತ್ತೆ–ಸೊಸೆಯರ ಜಗಳ, ಒಳಸಂಚುಗಳನ್ನೇ ಕಂಡಿದ್ದ ಪ್ರೇಕ್ಷಕರಿಗೆ ಅತ್ತೆ–ಸೊಸೆ ಕೂಡ ಅಮ್ಮ–ಮಗಳಂತೆ ಪ್ರೀತಿಯಿಂದಿರಲು ಸಾಧ್ಯ ಎಂಬುದನ್ನು ತೋರಿಸುತ್ತಿದೆ. ಕೆಲವು ಉತ್ಪ್ರೇಕ್ಷೆಗಳ ನಡುವೆಯೂ ಕುಸುಮಾ ಪಾತ್ರ ಬಹಳ ಇಷ್ಟವಾಗುತ್ತದೆ. ಭಾಗ್ಯಾಳ ಗಟ್ಟಿತನ, ನಿಲುವು ಮೆಚ್ಚುಗೆಗೆ ಪಾತ್ರವಾಗುತ್ತದೆ.

—ಪದ್ಮಾ ಶ್ರೀರಾಮಚಂದ್ರ

## ಒಂದು ತಾಸಿನ ಹಿಂಸೆ ಬೇಡ!

ಝೀ ಕನ್ನಡದ ‘ಲಕ್ಷ್ಮೀ ನಿವಾಸ’ ಧಾರಾವಾಹಿ ಒಂದು ಗಂಟೆ ಕಾಲ ಪ್ರಸಾರವಾಗುತ್ತದೆ. ಅರ್ಧ ಗಂಟೆ ಪ್ರಸಾರವಾಗುವ ಧಾರಾವಾಹಿ ನೋಡುವುದೇ ಕಷ್ಟವಾಗಿರುವಾಗ, ಒಂದು ಗಂಟೆ ನೋಡುವುದು ಇನ್ನೂ ಕಷ್ಟ. ಆದ್ದರಿಂದ ಧಾರಾವಾಹಿಯ ಸಮಯವನ್ನು ಅರ್ಧ ಗಂಟೆಗೆ ಮಿತಿಗೊಳಿಸಿ. ಉಳಿದ ಅವಧಿಗೆ ಮುಂಚಿನಂತೆ ‘ಶ್ರೀರಸ್ತು ಶುಭಮಸ್ತು’ಅನ್ನು ಪ್ರಸಾರ ಮಾಡಲಿ.

—ಅರುಣ್ ಕೆ.ಎಸ್., ಬೆಂಗಳೂರು